ಬಿಜಾಪುರ ನಗರದ ಹತ್ತಿರ ಇರುವ ಕೈಗಾರಿಕಾ ವಸಾಹತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 429(743)

ಸದಸ್ಯರ ಹೆಸರು : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ(ತಿಕೋಟ)

ಉತ್ತರಿಸುವ ಸಚಿವರು : ಶ್ರೀ ಆರ್.ವಿ.ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಪ್ರಶ್ನೆ

ಅ) ಬಿಜಾಪುರ ನಗರದ ಹತ್ತಿರ ಕೈಗಾರಿಕಾ ವಸಾಹತು ಪ್ರದೇಶ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಈ ಪ್ರದೇಶದಲ್ಲಿ ರಸ್ತೆ ಕುಡಿಯುವ ನೀರು ಪೂರೈಕೆ, ಇತರೆ ಅವಶ್ಯಕ ಕಾಮಗಾರಿಗಳನ್ನು ಅಭಿವೃದ್ಧಿ ಪಡಿಸಲಾಗಿದೆಯೆ, ಹಾಗಾದರೆ ಅಭಿವೃದ್ಧಿಗೆ ಮಾಡಿದ ವೆಚ್ಚ ಎಷ್ಟು?

ಇ) ಈವರೆಗೆ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳದಿದ್ದಲ್ಲಿ, ಈ ವಸಾಹತು ಪ್ರದೇಶದ ರಸ್ತೆಗಳು ಕೆಟ್ಟು ದುರಸ್ತಿಗೊಳಿಸಬೇಕಾದುದನ್ನು ಸರ್ಕಾರ ಮನಗಂಡಿದೆಯೇ? ಮುಖ್ಯವಾಗಿ ಈ ಪ್ರದೇಶಕ್ಕೆ ಸೇರುವ ಅಲಿಯಾಬಾದ್‌ನಿಂದ ಬರುವ ರಸ್ತೆ ಡಾಂಬರೀಕರಣವಾಗದೇ ಇರುವುದನ್ನು ಗಮನಿಸಿರುವುದೆ?

ಈ) ಹಾಗಾದರೆ ಯಾವಾಗ ಈ ದುರಸ್ತಿ ಕಾರ್ಯ ಕೈಗೊಳ್ಳಲಾಗುವುದು?

ಉ) ಹಾಗಾದರೆ ಎಷ್ಟು ದಿನಗಳೊಳಗಾಗಿ ಈ ಕಾರ್ಯವನ್ನು ಕೈಗೊಳ್ಳಲಾಗುವುದು?

ಉತ್ತರ

ಅ) ಬಿಜಾಪುರ ನಗರದ ಹತ್ತಿರ ಎರಡು ಕೈಗಾರಿಕಾ ಪ್ರದೇಶಗಳಾದ ಮಹಾಲಬಾಗಯತ್ ಹಾಗೂ ಅಲಿಯಬಾದ್‌ನಿಂದ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) 1) ಮಹಾಲಬಾಗಯತ ಕೈಗಾರಿಕಾ ಪ್ರದೇಶಕ್ಕೆ ರಸ್ತೆಯ ಕೆಲಸ ನೀರಿನ ಪೂರೈಕೆ ಚರಂಡಿ ಹಾಗೂ ದಾರಿ ದೀಪದ ವ್ಯವಸ್ಥೆ ಆಗಿದೆ. ಸದರಿ ಕೈಗಾರಿಕಾ ಪ್ರದೇಶದ ಅಭಿವೃದ್ಧಿ ಕೆಲಸಕ್ಕೆ 1.96 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ.

2) ಅಲಿಯಾಬಾಗ್ ಕೈಗಾರಿಕಾ ಪ್ರದೇಶಕ್ಕೆ ರಸ್ತೆ ಚರಂಡಿ ಕಾರ್ಯಗಳನ್ನು ಮಾಡಲಾಗಿದೆ. ನೀರಿನ ಪೂರೈಕೆ ಹಾಗೂ ವಿದ್ಯುತ್ ಪೂರೈಕೆ ಕೆಲಸಗಳು ಪ್ರಗತಿಯಲ್ಲಿವೆ. ಸದರಿ ಕೈಗಾರಿಕಾ ಪ್ರದೇಶದ ಅಭಿವೃದ್ಧಿ ಕೆಲಸಕ್ಕೆ 3.37 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ.

ಇ) ಮಹಾಲಬಾಗಯತ್ ಕೈಗಾರಿಕಾ ಪ್ರದೇಶದ ರಸ್ತೆಗಳನ್ನು ದುರಸ್ತಿಗೊಳಿಸಬೇಕಾಗಿರುತ್ತದೆ. ಈ ಪ್ರದೇಶಕ್ಕೆ ಸೇರುವ ಅಲಿಯಾಬಾದ್‌ನಿಂದ ಬರುವ ರಸ್ತೆಯನ್ನು ಡಾಂಬರೀಕರಣ ಮಾಡಲಾಗಿದೆ.

ಈ) ಮಹಾಲಬಾಗಯಾತ್ ಕೈಗಾರಿಕಾ ಪ್ರದೇಶದ ರಸ್ತೆಗಳನ್ನು ದುರಸ್ತಿಗೊಳಿಸಲು ಸಧ್ಯದಲ್ಲಿಯೇ ಕ್ರಮ ಕೈಗೊಳ್ಳಲಾಗುವುದು.

ಉ) ಮಹಾಲಬಾಗಯತ್ ಕೈಗಾರಿಕಾ ಪ್ರದೇಶಕ್ಕೆ ಅಂತಿಮ ಬೆಲೆ ನಿಗದಿಯಾಗಿದ್ದು ದುರಸ್ತಿ ಕೆಲಸವನ್ನು ವಾರ್ಷಿಕ ನಿರ್ವಹಣಾ ಕರೆ ಒಂದ ಹಾಗೆ ಮಾಡಲಾಗುವುದು.

ಸಣ್ಣ ಕೈಗಾರಿಕೆಗಳಿಗೆ ರಾಜ್ಯ ಸರ್ಕಾರ ನೀಡಬೇಕಾದ ಸಬ್ಸಿಡಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **430(746)**

ಸದಸ್ಯರ ಹೆಸರು :ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ(ತಿಕೋಟ)

ಉತ್ತರಿಸುವ ಸಚಿವರು : ಶ್ರೀ ಎಸ್.ಆರ್.ಕಾಶಪ್ಪನವರ್(ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು)

ಪ್ರಶ್ನೆ

ಅ. ಸಣ್ಣ ಕೈಗಾರಿಕೆಗಳಿಗೆ ರಾಜ್ಯ ಸರ್ಕಾರ ಇಲ್ಲಿಯವರೆಗೂ ನೀಡಬೇಕಾದ ಸಬ್ಸಿಡಿ ಹಣ ಎಷ್ಟು?

ಆ. ಈ ಸಬ್ಸಿಡಿ ಹಣವನ್ನು ಸರ್ಕಾರ ನೀಡಿದೆಯೇ. ನೀಡಿದ್ದರೆ, ಯಾವಾಗ ಈ ಹಣ ನೀಡಲಾಗಿದೆ, ಎಷ್ಟು ಹಣ ನೀಡಲಾಗಿದೆ?

ಇ. ಸಬ್ಸಿಡಿ ಹಣವನ್ನು ನೀಡದೆ, ಇದ್ದಲ್ಲಿ ಕಾರಣವೇನು? ಕಳೆದ ಮಾರ್ಚ್ ತಿಂಗಳಲ್ಲಿಯೇ ಈ ಸಬ್ಸಿಡಿ ಹಣ ನೀಡಲು ಉದ್ದೇಶಿಸಲಾಗಿತ್ತೇ?

ಈ. ನೀಡಬೇಕಾದ ಈ ಹಣವನ್ನು ಯಾವ ಯೋಜನೆಯ ಮೂಲಕ ಅಥವ ಯಾವ